## ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ 143 ಇಎಸ್‌ಟಿ(7) 2021

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560001,
ದಿನಾಂಕ:29-09-2021.

**ಸುತ್ತೋಲೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ನಿಯೋಜನೆಯಿಂದ ಕರ್ತವ್ಯಕ್ಕೆ ಮರಳಿದಿರುವ ಬಗ್ಗೆ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿನ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಬಿಬಿಎಂಪಿ ವ್ಯಾಪ್ತಿಯ ಹಾಗೂ ಹೊರಗಿನ ಜಿಲ್ಲೆಯವರೂ ಸಹ ಬಿಬಿಎಂಪಿ ಕೋವಿಡ್-19ರ ಕಾರ್ಯಕ್ಕೆ ನಿಯೋಜಿಸಲಾಗಿರುತ್ತದೆ. ಸರ್ಕಾರದ ಸುತ್ತೋಲೆ ದಿನಾಂಕ:18-07-2021ರನ್ವಯ ಕಾಲೇಜುಗಳು ದಿನಾಂಕ:26-07-2021ರಿಂದ ಪ್ರಾರಂಭವಾಗಿದ್ದು ಬೋಧನೆ ಮತ್ತು ಪರೀಕ್ಷಾ ಚಟುವಟಿಕೆ ಪ್ರಗತಿಯಲ್ಲಿರುತ್ತದೆ. ಅಲ್ಲದೆ ಪ್ರಸ್ತುತ 2021-22ನೇ ಸಾಲಿನ ಪ್ರವೇಶ ಪ್ರಕ್ರಿಯೆ ನಡೆಯುತ್ತಿದ್ದು, ಈ ಸಾಲಿನಿಂದ ಭೌತಿಕ ತರಗತಿಗಳನ್ನು ಸಹ ನಡೆಸಬೇಕಾಗಿರುತ್ತದೆ. ಸದರಿ ಸಂಸ್ಥೆಗಳ ಆಡಳಿತಾತ್ಮಕ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕೋವಿಡ್-19ರ ನಿಯೋಜನೆ ಮೇಲಿರುವ ಬೋಧಕ ಸಿಬ್ಬಂದಿಗಳು ತಕ್ಷಣ ಅವರ ಮಾತೃ ಸಂಸ್ಥೆಯಲ್ಲಿ ಕಾರ್ಯವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಮುಂದುವರೆದು ದಿನಾಂಕ:30-09-2021 ರೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದ ಬೋಧಕ ಸಿಬ್ಬಂದಿಗಳ ವೇತನವನ್ನು ತಡೆಹಿಡಿಯಲಾಗುವುದುದೆಂದು ಈ ಮೂಲಕ ಸೂಚಿಸಲಾಗಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಜಂಟಿ ನಿರ್ದೇಶಕರು(ಆಡಳಿತ)

**ಇವರಿಗೆ,**

1) ಸಂಬಂಧಪಟ್ಟ ಬೋಧಕ ಸಿಬ್ಬಂದಿಗಳಿಗೆ(ಪ್ರಾಂಶುಪಾಲರ ಮುಖಾಂತರ)
2) ಸಂಬಂಧಪಟ್ಟ ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್‌ಗಳ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರುಗಳಿಗೆ - ಇಲಾಖಾ ವೆಬ್ ಸೈಟ್ ಮೂಲಕ.

**ಪ್ರತಿ: ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.**

1) ಆಯುಕ್ತರು, ಬಿಬಿಎಂಪಿ ಕೇಂದ್ರ ಕಛೇರಿ, ಬೆಂಗಳೂರು.
2) ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ರಿಜಿಸ್ಟ್ರಾರ್(ಆಡಳಿತ), ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಆಯುಕ್ತರ ಆಪ್ತ ಶಾಖೆಗೆ.
5) ನಿರ್ದೇಶಕರ ಆಪ್ತ ಶಾಖೆಗೆ.
6) ಜಂಟಿ ನಿರ್ದೇಶಕರು(ಆಡಳಿತ) ಆಪ್ತ ಶಾಖೆಗೆ.
7) ಇ-ಆಡಳಿತ ವಿಭಾಗಕ್ಕೆ - ಇಲಾಖಾ ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸುವುದು.